


بسم اللہِ الرّحمٰن الرّحیم

# ಈದುಲ್ ಅಝ್‌ಹಾ – 2025

# ಕುರ್ಬಾನಿಯ ಯಥಾರ್ಥ ಉದ್ದೇಶ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **‘ಮಸ್ಜಿದ್ ಮುಬಾರಕ್’** ನಿಂದ **06–06–2025** ರಂದು ನೀಡಿದ **ಈದುಲ್ ಅಝ್‌ಹಾ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಮತ್ತು ಸೂರತುಲ್ ಹಜ್ಜಿನ 35ರಿಂದ 39ನೇ ಆಯತ್ತುಗಳನ್ನು ಪಠಿಸಿದ ಮತ್ತು ಅನುವಾದಿಸಿದ ನಂತರ ಹಝ್‌ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:)

ಈದುಲ್ ಅಝ್‌ಹಾದ ಸಂದರ್ಭದಲ್ಲಿ ಜಾನುವಾರುಗಳನ್ನು ಬಲಿ ನೀಡುವ ಮೂಲಕ ನಮಗೆ ನೀಡಲಾದ ಪಾಠ ಕೇವಲ ನೀವು ಬೇರೆ ಒಂದನ್ನು ಬಲಿನೀಡಿರಿ ಎಂದಲ್ಲ. ಬದಲಾಗಿ ಉನ್ನತ ವಸ್ತುವಿಗಾಗಿ ಕೆಳಮಟ್ಟದ ವಸ್ತುಗಳನ್ನು ಬಲಿ ನೀಡಲಾಗುತ್ತದೆ ಎಂಬ ಪಾಠವನ್ನು ನಮಗೆ ಕುರ್ಬಾನಿ ಎಂಬ ವಿಷಯದ ಮೂಲಕ ತಿಳಿಸಿಕೊಡಲಾಗಿದೆ. ಆದ್ದರಿಂದ ನಾವು ಸಹ ನಮ್ಮನ್ನು ಸೃಷ್ಟಿಸಿದ ದೇವನಿಗಾಗಿ ಬಲಿಯಾಗಲು ಸಿದ್ಧರಿರಬೇಕು; ನೀವು ಕೇವಲ ತಖ್ವದಲ್ಲಿ (ದೇವಭಯದಲ್ಲಿ) ನಡೆಯಬೇಕು ಎಂದು ಅಲ್ಲಾಹನು ಬಯಸುತ್ತಾನೆ. ಅವನ ಭಯವು ನಿಮ್ಮ ಹೃದಯದಲ್ಲಿರಬೇಕು. ಹೇಗೆ ಅವನ ಆಜ್ಞೆಗಳನ್ನು ಪಾಲಿಸಿ ಅವನ ಸಂಪ್ರೀತಿಯನ್ನು ಗಳಿಸುವುದು ಎಂಬ ಪ್ರಯತ್ನದಲ್ಲಿರಬೇಕು.

ಇತ್ತೀಚೆಗೆ ಪಾಕಿಸ್ತಾನದಲ್ಲಿ ಅಹ್ಮದಿಯಾ ಜಮಾಅತನ್ನು ಕುರ್ಬಾನಿ ಮಾಡುವುದರಿಂದ ತಡೆಯಲಾಗುತ್ತಿದೆ. ಕಳೆದ ಹಲವಾರು ವರ್ಷಗಳಿಂದ ನಮ್ಮನ್ನು ಕುರ್ಬಾನಿಯಿಂದ ತಡೆಯಲಾಗುತ್ತಿದೆ. ಆದರೆ ನಿಜವಾದ ಸಂಗತಿ ತಖ್ವ (ದೇವಭಯ) ಆಗಿದೆ, ಅಂದರೆ ನಮ್ಮನ್ನು ಕುರ್ಬಾನಿ ಮಾಡಲು ಬಿಡದಿದ್ದರೂ, ನಾವು ಯಾವ ಉದ್ದೇಶದಿಂದ ಕುರ್ಬಾನಿ ಮಾಡಲು ಬಯಸುತ್ತೇವೆ ಎಂಬ ನಮ್ಮ ಉದ್ದೇಶಗಳನ್ನು ಅಲ್ಲಾಹನು ಬಲ್ಲನು. ನಮ್ಮ ಉದ್ದೇಶವು ತಖ್ವದಲ್ಲಿ ನಡೆದು ಕುರ್ಬಾನಿ ಮಾಡುವುದಾಗಿದ್ದರೆ, ಕುರ್ಬಾನಿ ಮಾಡದಿದ್ದರೂ ಅಲ್ಲಾಹನು ನಮ್ಮ ಕುರ್ಬಾನಿಗಳನ್ನು ಸ್ವೀಕರಿಸುವವನಾಗಿದ್ದಾನೆ. ಯಾರು ತೋರಿಕೆಗಾಗಿ ಕುರ್ಬಾನಿ ಮಾಡುತ್ತಾರೋ, ಅದು ದೇವಭಯವಿಲ್ಲದ ಕುರ್ಬಾನಿಯಾಗಿದೆ. ಈ ವಿರೋಧಿಗಳು ಅಲ್ಲಾಹನ ಆಜ್ಞೆಗಳನ್ನು ಪಾಲಿಸುತ್ತಿದ್ದಾರೆಯೇ? ಜನರ ಹಕ್ಕುಗಳನ್ನು ತುಳಿಯಿರಿ ಎಂದು ಅಲ್ಲಾಹನು ಆಜ್ಞಾಪಿಸಿದ್ದಾನೆಯೇ? ಜನರ ಮೇಲೆ ದೌರ್ಜನ್ಯ ಮಾಡಿರಿ ಅಥವಾ ಅವರನ್ನು ಅಲ್ಲಾಹನ ಆರಾಧನೆಯಿಂದ ತಡೆಯಿರಿ ಎಂದು ಅಲ್ಲಾಹನು ಹೇಳಿದ್ದಾನೆಯೇ? ಅಲ್ಲಾಹನು ಅಂತಹ ಆಜ್ಞೆಗಳನ್ನು ನೀಡಿಲ್ಲ.

‘ಲಾ ಇಲಾಹ ಇಲ್ಲಲ್ಲಾಹ್’ ಎಂದು ಹೇಳುವ ಪ್ರತಿಯೊಬ್ಬ ವ್ಯಕ್ತಿಯು ಮುಸ್ಲಿಮನೆಂದು ಅಲ್ಲಾಹನು ಹೇಳಿದ್ದಾನೆ. ಆದರೆ ಈ ಜನರು ಇತ್ತೀಚೆಗೆ ಪಾಕಿಸ್ತಾನದಲ್ಲಿ ಅಹ್ಮದಿಯರೊಂದಿಗೆ ಮಾಡುತ್ತಿರುವುದು, ದೇವನಿಂದ ಅವರನ್ನು ದೂರ ಕೊಂಡೊಯ್ಯುವಂತಹ ವಿಷಯಗಳಾಗಿವೆ. ಇದು ಅನ್ಯಾಯವಾಗಿದೆ, ಆದರೆ ಏನೇ ಇರಲಿ, ಈ ಕುರ್ಬಾನಿಗಳು ಅಲ್ಲಾಹನ ಸಾಮೀಪ್ಯವನ್ನು ಪಡೆಯುವುದಕ್ಕಾಗಿವೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ನಮ್ಮ ಕರ್ತವ್ಯವಾಗಿದೆ; ಆದ್ದರಿಂದ ಒಂದು ವೇಳೆ ನಮಗೆ ಕುರ್ಬಾನಿ ಮಾಡಲು ಸಾಧ್ಯವಾಗದಿದ್ದರೂ ಅಲ್ಲಾಹನು ಅದನ್ನು ಸ್ವೀಕರಿಸುವನು, ಏಕೆಂದರೆ, ನಿಮ್ಮ ಕುರ್ಬಾನಿಗಳ ಮಾಂಸವಾಗಲಿ ರಕ್ತವಾಗಲಿ ನನಗೆ ತಲುಪುವುದಿಲ್ಲ, ಬದಲಾಗಿ ನಿಮ್ಮ ತಖ್ವ ನನ್ನನ್ನು ತಲುಪುತ್ತದೆ ಎಂದು ಅವನು ಹೇಳಿದ್ದಾನೆ.

ನಿಮ್ಮ ಸೃಷ್ಟಿಯ ಉದ್ದೇಶವು ಅಲ್ಲಾಹನ ಹಕ್ಕುಗಳನ್ನು ಪೂರೈಸುವುದು ಮತ್ತು ಅವನ ಆರಾಧನೆ ಮಾಡುವುದಾಗಿದೆ ಎಂದು ಅಲ್ಲಾಹನು ಸ್ಪಷ್ಟವಾಗಿ ಹೇಳಿದ್ದಾನೆ. ಇದರಲ್ಲಿ ಅತ್ಯಂತ ಮೊದಲನೆಯ ವಿಷಯ, ಜಮಾಅತಾಗಿ ನಮಾಝ್ ಅನುಷ್ಠಿಸುವುದಾಗಿದೆ; ಇತ್ತೀಚೆಗೆ ಎಲ್ಲ ಕಡೆಯಿಂದ ನಮ್ಮೊಂದಿಗೆ ಕಠಿಣವಾಗಿ ವರ್ತಿಸಲಾಗುತ್ತಿರುವಾಗ, ನಾವು ಮೊದಲಿಗಿಂತ ಹೆಚ್ಚಾಗಿ ನಮ್ಮ ನಮಾಝ್‌ಗಳನ್ನು ಕಾಪಾಡಿಕೊಳ್ಳುವುದು ನಮ್ಮ ಕರ್ತವ್ಯವಾಗಿದೆ. ಬಲಿಮೃಗ ಒದ್ದಾಡುವ ರೀತಿಯಲ್ಲೇ ನಾವು ಅಲ್ಲಾಹನ ಸನ್ನಿಧಿಯಲ್ಲಿ ಅಳುತ್ತಾ ದುಆ ಮಾಡಬೇಕು; ಪಾಕಿಸ್ತಾನದಲ್ಲಿ ವಾಸಿಸುವ ಅಹ್ಮದಿಯರು ವಿಶೇಷವಾಗಿ ಇದರ ಕಡೆಗೆ ಗಮನ ಹರಿಸಬೇಕು. ನಮ್ಮ ಮೇಲಿನ ಹೊಣೆಗಾರಿಕೆಯನ್ನು ತರಾತುರಿಯಲ್ಲಿ ಮಾಡಿ ಮುಗಿಸುವ ರೀತಿಯಲ್ಲಿ ನಮಾಝ್ ನಿರ್ವಹಿಸಬಾರದು, ಬದಲಾಗಿ ಅದರ ಹಕ್ಕನ್ನು ಪೂರೈಸಲು ನಿರ್ವಹಿಸಬೇಕು. ಜಮಾಅತಾಗಿ ಹಾಗೂ ಅತ್ಯಂತ ಸುಂದರವಾಗಿ ಮತ್ತು ಸಮಾಧಾನದಿಂದ ನಮಾಝ್ ನಿರ್ವಹಿಸಬೇಕು.

ನಾವು ನಮ್ಮ ಆರಾಧನೆಗಳ ಗುಣಮಟ್ಟವನ್ನು ಹೆಚ್ಚಿಸುತ್ತೇವೆ ಎಂದು ಇಂದು ಪ್ರತಿಜ್ಞೆ ಮಾಡಿರಿ; ಪಾಕಿಸ್ತಾನದಲ್ಲಿ ನಮಗೆ ಈದ್ ನಮಾಝ್ ಮಾಡಲು ಅನುಮತಿ ಸಿಗದಿರಬಹುದು ಮತ್ತು ಆಡಳಿತದ ಕಡೆಯಿಂದ ನಿರ್ಬಂಧಗಳನ್ನು ವಿಧಿಸಿರಬಹುದು, ಆದರೆ ನಾವು ಇದರ ಬಗ್ಗೆ ಚಿಂತಿಸಬಾರದು ಮತ್ತು ನಮ್ಮ ಹೃದಯಗಳಲ್ಲಿ ನಿರಾಶೆಗೆ ಎಡೆಮಾಡಿಕೊಡಬಾರದು, ನಿಮ್ಮ ಮನೆಗಳಲ್ಲೇ ಈದ್ ನಮಾಝ್ ನಿರ್ವಹಿಸಬಹುದು. ಆದರೆ, ನಾವು ಅಲ್ಲಾಹನ ಆರಾಧನೆ ಮತ್ತು ಅವನ ದಾಸರ ಹಕ್ಕುಗಳನ್ನು ಪೂರೈಸಲು ಪ್ರಯತ್ನಿಸುತ್ತೇವೆ ಎಂದು ಪ್ರತಿಜ್ಞೆ ಮಾಡಿರಿ; ನಮಾಝಿನ ಹಕ್ಕನ್ನು ಪೂರೈಸಲು ನಾವು ಸಂಪೂರ್ಣ ಪ್ರಯತ್ನ ಮಾಡಬೇಕು.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಆರಾಧನೆಯ ಎರಡು ಭಾಗಗಳಿವೆ, ಒಂದು ಮನುಷ್ಯನು ಅಲ್ಲಾಹನಿಗೆ ಭಯಪಡಬೇಕಾದ ರೀತಿಯಲ್ಲಿ ಭಯಪಡುವುದು. ಎರಡನೆಯ ಭಾಗವೆಂದರೆ ಮನುಷ್ಯನು ಅಲ್ಲಾಹನನ್ನು ಪ್ರೀತಿಸಬೇಕಾದ ರೀತಿಯಲ್ಲಿ ಪ್ರೀತಿಸುವುದು. ಇಸ್ಲಾಂ ಈ ಎರಡೂ ಆಜ್ಞೆಗಳನ್ನು ಪೂರೈಸಲು ಒಂದನೆಯ ಮಾರ್ಗವಾಗಿ ನಮಾಝನ್ನು ಇರಿಸಿದೆ. ಅದರಲ್ಲಿ ದೇವಭಯದ ಅಂಶವಿದೆ; ಎರಡನೆಯ ಮಾರ್ಗವಾಗಿ, ಪ್ರೀತಿಯ ಅಂಶವನ್ನು ವ್ಯಕ್ತಪಡಿಸಲು ಹಜ್ಜನ್ನು ಇರಿಸಿದೆ.

(ಹುಝೂರ್ ಹೇಳಿದರು:) ಅಹ್ಮದಿಯರು ತಮ್ಮ ವಿಶ್ವಾಸದಿಂದ ದೂರವಾಗಬೇಕು ಎಂಬುದೇ ಎದುರಾಳಿಗಳ ಪ್ರಯತ್ನವಾಗಿದೆ, ಆದರೆ ಅವರು ಇದರಲ್ಲಿ ಎಂದಿಗೂ ಯಶಸ್ವಿಯಾಗಲಾರರು. ದೃಢನಂಬಿಕೆ ಹೊಂದಿರುವ ಮತ್ತು ಹೃದಯದಲ್ಲಿ ಸತ್ಯವಿಶ್ವಾಸವಿರುವ ಅಹ್ಮದಿಯರು ವಿರೋಧಿಗಳ ದೌರ್ಜನ್ಯಗಳ ಕಾರಣದಿಂದ ಎಂದಿಗೂ ಹಿಂದೆ ಸರಿಯಲಾರರು. ಈ ದಿನಗಳಲ್ಲಿ ನಾವು ನಮ್ಮ ಆರಾಧನೆಗಳ ಗುಣಮಟ್ಟವನ್ನು ಹೆಚ್ಚಿಸಲು ಪ್ರಯತ್ನಿಸಬೇಕು.

ಅನೇಕ ಪಾಕಿಸ್ತಾನಿ ಅಹ್ಮದಿಯರ ಸಂಬಂಧಿಕರು ವಿದೇಶಗಳಲ್ಲಿ ಇದ್ದಾರೆ; ಅವರಿಗೆ ಪಾಕಿಸ್ತಾನದಲ್ಲಿ ಕುರ್ಬಾನಿ ಮಾಡಲು ಸಾಧ್ಯವಾಗದಿದ್ದರೆ, ವಿದೇಶದಲ್ಲಿರುವ ತಮ್ಮ ಸಂಬಂಧಿಕರ ಮೂಲಕ ಕುರ್ಬಾನಿ ಮಾಡಿಸಬಹುದು. ಆಫ್ರಿಕಾದ ಬಡ ದೇಶಗಳಲ್ಲಿ ಕುರ್ಬಾನಿ ಮಾಡಿಸಬಹುದು; ಕುರ್ಬಾನಿ ಮಾಡುವುದರಿಂದ ತಡೆಯಲಾಗಿದ್ದರೆ, ಅಲ್ಲಾಹನು ಕುರ್ಬಾನಿ ಮಾಡಲು ಇತರ ಮಾರ್ಗಗಳನ್ನು ಸಹ ನೀಡಿದ್ದಾನೆ. ಬಡವರ ಬಗ್ಗೆ ಕಾಳಜಿ ವಹಿಸಲು, ಅವರಿಗೆ ಊಟ ನೀಡಲು, ಅವರ ಅಗತ್ಯಗಳನ್ನು ನೋಡಿಕೊಳ್ಳಲು ಅಲ್ಲಾಹನು ಹೇಳಿದ್ದಾನೆ. ಅಲ್ಲಾಹನು ಹಜ್ಜಿನ ಜೊತೆಗೆ ಕುರ್ಬಾನಿಯನ್ನು ಇರಿಸಿದ್ದಾನೆ, ಆದರೆ ಕುರ್ಬಾನಿಗೆ ಇತರ ಅವಕಾಶ ಮತ್ತು ಸಂದರ್ಭಗಳು ಸಹ ಇವೆ, ಅವುಗಳಿಂದ ಪ್ರಯೋಜನ ಪಡೆಯಬೇಕು. ಸಮಯದ ಮತ್ತು ಸಂಪತ್ತಿನ ಕುರ್ಬಾನಿಯೂ ಇದೆ; ಅದಕ್ಕಾಗಿಯೂ ಸಂಪೂರ್ಣ ಪ್ರಯತ್ನ ಮಾಡಬೇಕು. ಅದಲ್ಲದೆ, ಅಲ್ಲಾಹನು ತಡೆದಿರುವ ವಿಷಯಗಳಿಂದ ದೂರವಿರುವುದು ಕೂಡ ಒಂದು ತ್ಯಾಗವಾಗಿದೆ.

ಅದೇ ರೀತಿಯಲ್ಲಿ ಸೃಷ್ಟಿಗಳ ಹಕ್ಕುಗಳನ್ನು ಪೂರೈಸುವುದು ಸಹ ಬಹಳ ಮುಖ್ಯ; ಇವುಗಳಲ್ಲಿ ಪತಿ–ಪತ್ನಿ, ಅಕ್ಕ–ತಂಗಿಯರು, ಅಣ್ಣ–ತಮ್ಮಂದಿರು ಮತ್ತು ಆಪ್ತ ಸಂಬಂಧಿಕರ ಹಕ್ಕುಗಳು ಬರುತ್ತವೆ, ನೆರೆಹೊರೆಯವರ ಮತ್ತು ಬಡಾವಣೆಯಲ್ಲಿರುವವರ ಹಕ್ಕುಗಳು ಸಹ ಇವೆ, ಇವೆಲ್ಲದರ ಬಗ್ಗೆ ಕಾಳಜಿ ವಹಿಸಬೇಕು. ಇಸ್ಲಾಂ ಶತ್ರುವಿನ ಹಕ್ಕುಗಳನ್ನು ಕೂಡ ಇರಿಸಿದೆ; ಮುಸ್ಲಿಮೇತರರ ಹಕ್ಕುಗಳನ್ನು ಕೂಡ ಇರಿಸಲಾಗಿದೆ. ನಾವು ಸೃಷ್ಟಿಗಳ ಹಕ್ಕುಗಳನ್ನು ಸಂಪೂರ್ಣವಾಗಿ ಪೂರೈಸಿದರೆ, ಕೆಲವೊಮ್ಮೆ ಸೃಷ್ಟಿಗಳ ಹಕ್ಕುಗಳು ಆರಾಧನೆಗಳ ರೂಪವನ್ನು ಸಹ ಪಡೆದುಕೊಳ್ಳುತ್ತವೆ. ಆದ್ದರಿಂದ ನಮ್ಮನ್ನು ಆರಾಧನೆಗಳಿಂದ ತಡೆಯುವುದರಿಂದ ಯಾವುದೇ ವ್ಯತ್ಯಾಸ ಉಂಟಾಗುದಿಲ್ಲ; ನೀವು ಆಡು ಅಥವಾ ಮೇಕೆಯನ್ನು ಬಲಿ ನೀಡಿದ್ದೀರಿ ಎಂಬ ಕಾರಣಕ್ಕಾಗಿ ಮಾತ್ರ ಅಲ್ಲಾಹನು ಸಂತೋಷಪಡುವುದಿಲ್ಲ, ಬದಲಾಗಿ ಸೃಷ್ಟಿಗಳ ಹಕ್ಕುಗಳನ್ನು ಪೂರೈಸುವುದರಿಂದ ಅಲ್ಲಾಹನು ಸಂಪ್ರೀತನಾಗುತ್ತಾನೆ.

'ತನಗಾಗಿ ಇಷ್ಟಪಡುವುದನ್ನೇ ತನ್ನ ಸಹೋದರನಿಗೂ ಇಷ್ಟಪಡುವ ವರೆಗೆ ನಿಮ್ಮಲ್ಲಿ ಯಾರೂ ವಿಶ್ವಾಸಿಯಾಗಲು ಸಾಧ್ಯವಿಲ್ಲ' ಎಂದು ಹದೀಸಿನಲ್ಲಿ ಇದೆ. ನೀವು ಸತ್ಯವಿಶ್ವಾಸವನ್ನು ಹೊಂದುವ ವರೆಗೆ ಸ್ವರ್ಗವನ್ನು ಪ್ರವೇಶಿಸಲು ಸಾಧ್ಯವಿಲ್ಲ, ಹಾಗೂ ನೀವು ಪರಸ್ಪರ ಪ್ರೀತಿಸುವವರೆಗೆ ನೀವು ಸತ್ಯವಿಶ್ವಾಸವನ್ನು ಹೊಂದಲು ಸಾಧ್ಯವಿಲ್ಲ' ಎಂದು ಹಝ್ರತ್ ಪೈಗಂಬರ್[ಸ] ಹೇಳಿರುವರು.

ಆದ್ದರಿಂದ, ಅಹ್ಮದಿಯರು ತಮ್ಮ ನಡುವಿನ ಎಲ್ಲ ಮನಸ್ತಾಪಗಳನ್ನು ಕೊನೆಗೊಳಿಸಬೇಕು, ಇದರಿಂದ ನಾವು ಪರಲೋಕದ ಸ್ವರ್ಗದ ವಾರಸುದಾರರಾಗುವುದಲ್ಲದೆ, ಈ ಲೋಕದಲ್ಲಿಯೂ ಸ್ವರ್ಗದಂತಹ ಸಮಾಜವನ್ನು ನಿರ್ಮಿಸಲು ಸಾಧ್ಯವಾಗುತ್ತದೆ; ಇಂದಿನ ಪರಿಸ್ಥಿತಿಗಳಲ್ಲಿ, ವಿರೋಧಿಗಳಿಗೆ ಯಾವುದೇ ರೀತಿಯಲ್ಲಿ ನಮ್ಮ ಒಗ್ಗಟ್ಟನ್ನು ಮುರಿಯಲು ಸಾಧ್ಯವಾಗದಿರಲಿಕ್ಕಾಗಿ ಅಹ್ಮದಿಯರು ವಿಶೇಷವಾಗಿ ಎಲ್ಲ ಹಗೆಗಳನ್ನು ದೂರಮಾಡಿ ಸುಂದರವಾದ ಸಮಾಜಕ್ಕೆ ಬುನಾದಿ ಹಾಕಬೇಕು. ನಮ್ಮಲ್ಲಿ ತಖ್ವ ಉಂಟಾಗುವಾಗ ಮಾತ್ರ ನಾವು ಅಲ್ಲಾಹನ ಸಾಮೀಪ್ಯವನ್ನು ಪಡೆಯುವವರಾಗುತ್ತೇವೆ; ಕುರ್ಬಾನಿ ಮಾಡದಿದ್ದರೂ ನಾವು ಕುರ್ಬಾನಿ ಮಾಡುವವರಾಗುತ್ತೇವೆ.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಹಝ್ರತ್ ಪೈಗಂಬರ್[ಸ] ತಯಾರು ಮಾಡಿದ ಜಮಾಅತಿನಲ್ಲಿ ಇದ್ದ ಎಲ್ಲರೂ ಪರಿಶುದ್ಧರಾಗಿದ್ದರು ಮತ್ತು ಎಲ್ಲರೂ ತಮ್ಮ ಜೀವವನ್ನು ದೀನಿಗಾಗಿ ತ್ಯಾಗ ಮಾಡಿದ್ದರು. ಅವರಲ್ಲಿ ಒಬ್ಬ ವ್ಯಕ್ತಿ ಕೂಡ ಕಪಟ ಜೀವನ ನಡೆಸುವವನಾಗಿರಲಿಲ್ಲ.

(ಹುಝೂರ್ ಹೇಳಿದರು:) ನಮ್ಮ ಈದ್ ಕೇವಲ ತೋರಿಕೆಯ ಈದ್ ಆಗದೆ, ಅಲ್ಲಾಹನ ಹಕ್ಕುಗಳು ಮತ್ತು ಸೃಷ್ಟಿಗಳ ಹಕ್ಕುಗಳನ್ನು ಪೂರೈಸುವ ಈದ್ ಆಗುವಂತೆ ಅಲ್ಲಾಹನು ಮಾಡಲಿ. ನಾವು ಅವನ ಅನುಗ್ರಹಗಳನ್ನು ಸದಾ ಪಡೆಯುವವರಾಗಲಿ.

ದುಆಗಳನ್ನು ಮಾಡಿರಿ ಮತ್ತು ದುಆಗಳಲ್ಲಿ ಜೀವತ್ಯಾಗ ಮಾಡಿದ ಹುತಾತ್ಮರ (ಶಹೀದರ) ಮಕ್ಕಳನ್ನು ಕೂಡ ನೆನಪಿಟ್ಟುಕೊಳ್ಳಿರಿ. ಅಲ್ಲಾಹನು ಅವರನ್ನು ಮತ್ತು ಅವರ ಸಂತತಿಗಳನ್ನು ತನ್ನ ರಕ್ಷಣೆಯಲ್ಲಿ ಇರಿಸಲಿ; ಸೆರೆಯಾಳುಗಳಿಗಾಗಿಯೂ ದುಆ ಮಾಡಿರಿ. ಪಾಕಿಸ್ತಾನದಲ್ಲಿ ವಿಶೇಷವಾಗಿ ಕಾನೂನಿನಲ್ಲಿ ಅನೇಕ ನಿರ್ಬಂಧಗಳನ್ನು ವಿಧಿಸಲಾಗಿದೆ. ಅಲ್ಲಾಹನು ಈ ನಿರ್ಬಂಧಗಳನ್ನು ದೂರ ಮಾಡಲು ಮತ್ತು ಸರಿಯಾದ ರೀತಿಯಲ್ಲೂ ಮುಕ್ತವಾಗಿಯೂ ಆರಾಧನೆಯ ಹಕ್ಕನ್ನು ಪೂರೈಸುವ ಸೌಭಾಗ್ಯವನ್ನು ನಮಗೆ ನೀಡಲು ದುಆ ಮಾಡಿರಿ. ಎಲ್ಲ ಅಡೆತಡೆಗಳು ದೂರವಾಗಲಿ, ಸ್ವತಂತ್ರವಾಗಿ ಜಾನುವಾರುಗಳ ಕುರ್ಬಾನಿಗಳನ್ನು ಮಾಡಲು ಸಾಧ್ಯವಾಗಲಿ; ನಾವು ಈ ಕುರ್ಬಾನಿಗಳ ನಿಜವಾದ ಸ್ವರೂಪವನ್ನು ಅರ್ಥಮಾಡಿಕೊಳ್ಳುವಂತಹ ತಿಳುವಳಿಕೆಯನ್ನು ಅಲ್ಲಾಹನು ನಮಗೆ ದಯಪಾಲಿಸಲಿ.

ಖುತ್ಬದ ಕೊನೆಯಲ್ಲಿ ಹುಝೂರ್ ಹೇಳಿದರು: ಇದರೊಂದಿಗೆ ನಾನು ಖುತ್ಬ ಕೇಳುತ್ತಿರುವ ಎಲ್ಲರಿಗೂ ಮತ್ತು ಇಲ್ಲಿ ಕುಳಿತಿರುವ ಎಲ್ಲರಿಗೂ ಈದ್ ಮುಬಾರಕ್ ಹೇಳುತ್ತೇನೆ. ಅಲ್ಲಾಹನು ಈ ಈದನ್ನು ಅನುಗ್ರಹದಾಯಕವಾಗಿಸಲಿ. ಆಮೀನ್.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ؕ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Eid-ul-Az'ha Khutba delivered by Hadrath Khaleefatul Masih Al Khamis[(atba)]***

*At, Masjid Mubarak, Islamabad, Tilford, UK, on 06-06-2025.*

**Summarized by** *Majlis Ansarullah Bharat*

***Kannada Translation:*** Moulavi Inamullah for Kannada Desk,

***Reviewed by:*** M.P Ibrahim | ***Layout:*** Basheer K.P. Manjeshwar

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*